<u>ದಿನಾಂಕಃ 22-08-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ- 3 ನೇ ಎದುರುದಾರ ಪರ ವಕೀಲರಿಂದಃ-</u>

ದೀಪಲಕ್ಷ್ಮಿ ನನ್ನ ಮಗಳು. ದಿಃ09.10.2022 ರಂದು ಸಂಜೆಃ05.30 ರಿಂದ 06.00 ಗಂಟೆಯ ನಡುವೆ ಅಪಘಾತವಾಗಿರುತ್ತದೆ. ಸದರಿ ದಿನ ನನ್ನ ಮಗಳು ಚಿಕ್ಕಮಗಳೂರಿನಿಂದ ಮೈಸೂರಿಗೆ ಹೋಗುತ್ತಿದ್ದಳು. ಕಾರು ನಂ.ಕೆಎ-18/ಎನ್-0628 ಅನ್ನು ಕಾರ್ತಿಕ್ ಚಲಾಯಿಸುತ್ತಿದ್ದನು. ಸದರಿ ಕಾರ್ತಿಕ್ ನ ಚಾಲನಾ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅಪಘಾತಪಡಿಸಿದ ವಾಹನ ಬೇಲೂರಿನಿಂದ ಚಿಕ್ಕಮಗಳೂರು ಕಡೆಗೆ ಬರುತ್ತಿತ್ತು. ಅಪಘಾತವಾದ ತಕ್ಷಣ ಬೇಲೂರು ಸರ್ಕಾರಿ ಆಸ್ಪತ್ರೆಗೆ ನನ್ನ ಮಗಳನ್ನು ಕರೆದುಕೊಂಡು ಹೋಗಲಾಗಿರುತ್ತದೆ. ನನ್ನ ಮಗಳಿಗೆ ಅಪಘಾತವಾದ ಬಗ್ಗೆ ಬೇಲೂರು ಆಸ್ಪತ್ರೆಯಲ್ಲಿ ತಿಳಿಸಿದ್ದು ಈ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಅಪಘಾತದ ಬಗ್ಗೆ ಪೊಲೀಸರಿಗೆ ನಾನೇ ದೂರನ್ನು ನೀಡಿರುತ್ತೇನೆ. ಅಪಘಾತದ ಸಮಯದಲ್ಲಿ ನಾನು ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ. ಅಪಘಾತದ ಸಮಯದಲ್ಲಿ ನನ್ನ ಮಗಳಿಗೆ 6 ವರ್ಷ ವಯಸ್ಸು ಆಗಿತ್ತು. ನನ್ನ ಮಗಳು ಈಗ 2 ನೇ ತರಗತಿ ಓದುತ್ತಿದ್ದಾಳೆ. ನನ್ನ ಮಗಳು ವಿದ್ಯಾಭ್ಯಾಸವನ್ನು ಹೊರತುಪಡಿಸಿ ಇತರ ಆಟೋಟ ಚಟುವಟಿಕೆಗಳಲ್ಲಿ ಭಾಗಿಯಾಗಲು ಆಗುತ್ತಿಲ್ಲ ಎನ್ನುವ ಬಗ್ಗೆ ಶಾಲೆಯಿಂದ ದಾಖಲೆಗಳನ್ನು ತಂದು ಹಾಜರುಪಡಿಸಿರುವುದಿಲ್ಲ. ನನ್ನ ಮಗಳು ಜನಪ್ರಿಯ ಆಸ್ಪತ್ರೆ, ನಿಮಾನ್ಸ್ ಹಾಗೂ ಟ್ರಸ್ಟ್ ವೆಲ್ ಆಸ್ಪತ್ರೆಗಳಲ್ಲಿ

ಒಳರೋಗಿಯಾಗಿ ದಾಖಲಾಗಿದ್ದಳು. ಈ ಬಗ್ಗೆ ಎಲ್ಲಾ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಈಗಲೂ ಮುಂದುವರಿದ ಚಿಕಿತ್ಸೆಯನ್ನು ಪಡೆಯುತ್ತಿರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅವಳನ್ನು ನೋಡಿಕೊಳ್ಳಲು ದಿನಕ್ಕೆ ರೂ.500/- ಯಂತೆ ನೀಡಿ ಸಹಾಯಕರನ್ನು ನೇಮಕ ಮಾಡಿಕೊಂಡಿದ್ದೇನೆ ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಮಗಳ ಹೆಸರು ಶಾಲೆಯಲ್ಲಿ ದೀಪಲಕ್ಷ್ಮಿ ಎಂದು ಇರುತ್ತದೆ ಎಂದರೆ ಸರಿ.

ನಿಪಿ-54, 57, 61, 62, 63, 66, 68, 71, 86, 89, 90, 93, 107, 155 ರಲ್ಲಿ ಬೇರೆ ಹೆಸರುಗಳು ಇರುತ್ತದೆ ಎಂದರೆ ಸರಿಯಲ್ಲ. ನಿಪಿ-103 ರಲ್ಲಿ ದಿನಾಂಕ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-115 ರಿಂದ 117 ರಲ್ಲಿ ಯಾವ ಆಸ್ಪತ್ರೆಯಿಂದ ಬಿಲ್ ಅನ್ನು ನೀಡಲಾಗಿರುತ್ತದೆ ಎಂದು ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಗಳನ್ನು ನಾನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ--118, 129, 153, 157 ರಲ್ಲಿ ಗಾಯಾಳುವಿನ ಹೆಸರು ಇಲ್ಲ ಎಂದರೆ ಸರಿಯಲ್ಲ. ನಿಪಿ-159, 160, 161 ರಲ್ಲಿ ಗಾಯಾಳುವಿನ ಹೆಸರು ಲಾವಣ್ಯ ಎಂದು ಇರುತ್ತದೆ ಎಂದರೆ ಸರಿ. ನಾನು ಹಾಜರುಪಡಿಸಿರುವ ದಾಖಲೆಗಳು ಒಂದಕ್ಕೊಂದು ತಾಳೆ ಇರುವುದಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರವನ್ನು ಪಡೆಯುವ ಉದ್ದೇಶದಿಂದ ಮೆಡಿಕಲ್ ಬಿಲ್ಲುಗಳನ್ನು ಈ ಕೇಸಿಗಾಗಿ ಸೃಷ್ಟಿಸಿ ಹಾಕಿರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮಗಳ ಎಲ್ಲಾ ಗಾಯಗಳು ಈಗ ವಾಸಿಯಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮಗಳು ಹೋಗುತ್ತಿದ್ದ

ಚಾಲಕನ ತಪ್ಪಿನಿಂದಲೇ ಸದರಿ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. 3 ನೇ ಎದುರುದಾರರು ಪರಿಹಾರವನ್ನು ನೀಡಲು ಭಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ- 1 ನೇ ಎದುರುದಾರ ಪರ ವಕೀಲರಿಂದಃ-

(1 ನೇ ಎದುರುದಾರ ಪರ ವಕೀಲರನ್ನು ಕರೆಸಲಾಗಿ ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು).

ಪಾಟೀ ಸವಾಲುಃ- 2 ನೇ ಎದುರುದಾರರು ಏಕಪಕ್ಷೀಯ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ., ಚಿಕ್ಕಮಗಳೂರು.

ಎಸ್ಆರ್ಃ

ಎಂ.ವಿ.ಸಿ.ನಂ.138/2023

ಪಿ.ಡಬ್ಲ್ಯೂ: 1